

ಮುಂದೊಂದು ದಿನ ಹಿಮಾಲಯದ ಕಣಿವೆಯಲ್ಲಿ ತಾವು ತೆಗೆದ ಹೆಜ್ಜೆಗುರುತುಗಳ ಛಾಯಾಚಿತ್ರ ಯೇತಿಯದ್ದು ಎನ್ನುವುದರಲ್ಲಿ ಅನುಮಾನವೇನೂ ಇದ್ದಂತಿರಲಿಲ್ಲ.

ಹಿಲರಿ ಅವರೊಂದಿಗೆ ಕೆಲಸ ಮಾಡಿರುವ ಹಿಮಾಲಯದ ತಪ್ಪಲಿನ ಖುಮ್‌ಜುಂಗ್ ಎನ್ನುವ ಗ್ರಾಮದ ಮುಖ್ಯಸ್ಥ ಖುಂಜೊ ಚುಂಬಿ ಕೂಡ ಯೇತಿಯನ್ನು ನಂಬಿದವರೇ. ಯೇತಿ ಕಿರುಚುವುದನ್ನು ಒಂದೇ ದಿನದಲ್ಲಿ ಮೂರು ಬಾರಿ ಕೇಳಿಸಿಕೊಂಡಿರುವುದಾಗಿ ಅವರು ಹೇಳಿದ್ದಾರೆ. ಅವರ ಮಕ್ಕಳ ಅದೃಷ್ಟ ಇನ್ನೂ ದೊಡ್ಡದು. ಅಪ್ಪ ಕೂಗನ್ನಷ್ಟೇ ಕೇಳಿಸಿಕೊಂಡಿದ್ದರೆ, ಮಕ್ಕಳು ಯೇತಿಯನ್ನು ಕಣ್ಣಾರೆ ಕಂಡಿದ್ದಾರಂತೆ. ಯೇತಿ ಎನ್ನುವುದು ಕಾಲ್ಪನಿಕ ಜೀವಿ ಎನ್ನುವ ಮಾತಿಗೂ ಖುಂಜೊ ಅವರ ಬಳಿ ಉತ್ತರವಿದೆ. ‘‘ನೇಪಾಳದಲ್ಲಿ ಸಿಂಹ ಹಾಗೂ ಜಿರಾಫೆಗಳಿವೆ ಎನ್ನುವುದನ್ನು ನಾವು ನಂಬುವುದಿಲ್ಲ. ಏಕೆಂದರೆ ಅವು ನಮ್ಮಲ್ಲಿಲ್ಲ. ಹಾಗೆಯೇ ನೀವು ಯೇತಿಗಳನ್ನು ನಂಬುವುದಿಲ್ಲ. ಏಕೆಂದರೆ ಅವು ನಿಮ್ಮ ದೇಶದಲ್ಲಿಲ್ಲ’’ ಎಂದು ಖುಂಜೊ ವಾದ ಹೂಡುತ್ತಾರೆ. ಅವರ ಮಾತಿನಲ್ಲಿ, ಯೇತಿ ಎನ್ನುವುದು ನೇಪಾಳದ ವಿಶಿಷ್ಟ ಜೀವಪ್ರಭೇದ ಎನ್ನುವ ಇಂಗಿತ ಅವರ ಮಾತಿನಲ್ಲಿ ವ್ಯಕ್ತವಾಗುತ್ತದೆ. ಯೇತಿಯ ಧ್ವನಿ ಕೀರಲು ಕೀರಲಾಗಿತ್ತು ಎಂದು ಹೇಳಿರುವ ಖುಂಜೊ, ಮನುಷ್ಯನ ತಲೆಯನ್ನು ಹೊಂದಿದ್ದ ಆ ಪ್ರಾಣಿ ನಾಯಿಯಂತೆ ನಡೆದುಕೊಂಡು ಹೋಯಿತು ಎಂದು ತಮ್ಮ ಮಕ್ಕಳು ಕಂಡ ದೃಶ್ಯದ ಮೂಲಕ ಯೇತಿಯನ್ನು ಚಿತ್ರಿಸುತ್ತಾರೆ. ನೋಡಲಿಕ್ಕದು ಹತ್ತು ವರ್ಷದ ಹುಡುಗನಂತಿತ್ತು ಎನ್ನುವುದು ಅವರ ಬಣ್ಣನೆ.

ಖುಂಜೊ ಅವರ ಹಳ್ಳಿಯಲ್ಲಿ, ಮಾಟಗಾತಿ ಎಂದು ನಂಬಲಾದ ಮುದುಕಿಯೊಬ್ಬಳ ಮನೆಯಲ್ಲಿದ್ದ ತಲೆಬುರುಡೆ ಯೇತಿಯದು ಎನ್ನುವುದು ಅಲ್ಲಿನ ಜನರ ನಂಬಿಕೆ. ‘ಆ ಬುರುಡೆಯಿಂದ ತಮ್ಮೂರಿಗೆ ಅದೃಷ್ಟ, ಅದು ಊರಿನಿಂದ ಹೊರಗೆ ಹೋದರೆ ಕೇಡು’ ಎನ್ನುವುದು ಗ್ರಾಮಸ್ಥರ ನಂಬಿಕೆ. ಇಂಥ ಬುರುಡೆಯನ್ನು ಹಿಲರಿ ಹಾಗೂ ಡೊಯಿಗ್ ಅವರು ಪಡೆದುಕೊಂಡು ಸಂಶೋಧಕರ ಎದುರು ಪ್ರದರ್ಶಿಸಿದ್ದಾರೆ. ಅಜ್ಜಿಯಿಂದ ಬುರುಡೆಯನ್ನು ಪಡೆಯಲು ಹಿಲರಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಊರಿನ ಧಾರ್ಮಿಕಕೇಂದ್ರ ಹಾಗೂ ಶಾಲೆಗೆ ಬಿಡುಗೈ ದೇಣಿಗೆ ನೀಡಿದ ನಂತರವೇ ಅವರಿಗೆ ಬುರುಡೆಯ ಮೇಲೆ ಹಕ್ಕು ದೊರೆತದ್ದು.

ಖುಂಜೊ ಹಳ್ಳಿಯ ಜನರ ಪಾಲಿಗೆ ಯೇತಿಯ ಬುರುಡೆ ಅದೃಷ್ಟದಾಯಕವಾಗಿತ್ತು. ಈ ಅದೃಷ್ಟದ ಅನುಭವ ಹಿಲರಿ ಹಾಗೂ ಡೊಯಿಗ್ ಅವರಿಗೂ ಆಗಿದೆ ಎನ್ನುವುದು ಕೆಲವರ ನಂಬಿಕೆ. ಯೇತಿಯ ಬುರುಡೆಯೊಂದಿಗೆ ಬ್ರೂಕ್ಲಿನ್‌ಗೆ ಹೋಗಬೇಕಿದ್ದ ವಿಮಾನಯಾನವನ್ನು ಅವರು ಕೊನೆಯ ಕ್ಷಣದಲ್ಲಿ ರದ್ದುಪಡಿಸಿದ್ದರು. ಕಾಕತಾಳೀಯ ಎನ್ನುವಂತೆ, ಆ ವಿಮಾನ ಅಪಘಾತಕ್ಕೀಡಾಯಿತು. ಪ್ರಾಣಾಪಾಯದಿಂದ ಪಾರಾದರೂ ಹಿಲರಿಯವರೇನೂ ಬುರುಡೆ ಪುರಾಣವನ್ನು ನಂಬುವುದಿಲ್ಲ. ವೈಯಕ್ತಿಕವಾಗಿ ನನಗೆ ಶುಭಶಕುನಗಳಲ್ಲಿ ಅಪಶಕುನಗಳಲ್ಲಿ ನಂಬಿಕೆಯಿಲ್ಲ ಎಂದವರು ಹೇಳಿಕೊಂಡಿದ್ದಾರೆ.

ಯೇತಿಯ ಬಗ್ಗೆ ಮಾತ್ರವಲ್ಲ, ಹಿಮಪ್ರದೇಶದಲ್ಲಿ ವಾಸಿಸುವ ಜನರ ಬಗ್ಗೆ ಕೂಡ ಹಿಲರಿ ಅವರಿಗೆ ಕುತೂಹಲ. ‘ನಾವು ಕೇವಲ ಯೇತಿಗಳನ್ನು ಹುಡುಕಿಕೊಂಡು ಮಾತ್ರ ಹಿಮಾಲಯಕ್ಕೆ ಹೋಗಲಿಲ್ಲ. ಅತ್ಯಂತ ಎತ್ತರದ ಪ್ರದೇಶದಲ್ಲಿ ವಾಸಿಸುವ ಜನರ ಜೀವನವನ್ನು ಅಧ್ಯಯನ ನಡೆಸುವುದೂ ನಮ್ಮ ಉದ್ದೇಶವಾಗಿತ್ತು’ ಎಂದವರು ಹೇಳಿದ್ದಾರೆ. ಸುಮಾರು 19 ಸಾವಿರ ಅಡಿ ಎತ್ತರದಲ್ಲಿ ಮನೆಗಳನ್ನು ಕಟ್ಟಿಕೊಂಡು ಪ್ರತಿಕೂಲ ಹವಾಮಾನದೊಂದಿಗೆ ಬದುಕು